GATWU
Reg No. ALCB-4/DRT/CUA/18/2005-06
Garments and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
(Affiliated to New Trade Union Initiative - NTUI)

ದಿನಾಂಕ: 30.11.2020

30/11

ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೇ

ವಿಷಯ: ಕೈಗಾರಿಕಾ ವಿವಾದವು (ವಿವಾದ ಸಂಖ್ಯೆ. ಐಡಿಎ–1/ಸಿಆರ್–38/2020–21., ದಿನಾಂಕ 26.08.2020) ಬಾಕಿಯಿರುವಾಗಲೇ ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ., ಆಡಳಿತವರ್ಗವು ಕಾನೂನು ಬಾಹಿರವಾಗಿ ಕಂಪನಿಗೆ ಬೀಗ ಮುದ್ರೆ ಹಾಕಿ, ಕೈಗಾರಿಕಾ ವಿವಾದ ಕಾಯಿದೆ ಸೆಕ್ಷನ್ 23 ರನ್ನು ಉಲ್ಲಂಘಿಸಿರುವ ಬಗ್ಗೆ ದೂರು.

----

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ., ಸರ್ವೆ ನಂ. 26/2, 27/2, ನಂ. 93, ಅರ್ಚಕರಹಳ್ಳಿ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ. ಈ ಕಂಪನಿಯು ಸುಮಾರು 13 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಅಂದಿನಿಂದಲೂ ಕಾರ್ಮಿಕರು ದುಡಿಯುತ್ತಿದ್ದಾರೆ.

ಕಾರ್ಮಿಕರು ಮತ್ತು ಮಾಲೀಕರ ನಡುವೆ ಕೈಗಾರಿಕಾ ವಿವಾದಕ್ಕೆ ಸಂಬಂಧಿಸಿಂತೆ ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ) ರವರ ಸಮ್ಮುಖದಲ್ಲಿ ಸಂಧಾನ ಪ್ರಕ್ರಿಯೆಯು ನಡೆಯುತ್ತಿರುವಾಗಲೇ (ವಿವಾದ ಸಂಖ್ಯೆ. ಐಡಿಎ–1/ಸಿಆರ್–38/2020–21., ದಿನಾಂಕ 26.08.2020) ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ., ಆಡಳಿತವರ್ಗವು ದಿನಾಂಕ 30.11.2020 ರಂದು ಕಂಪನಿಗೆ ಕಾನೂನು ಬಾಹಿರವಾಗಿ ಬೀಗ ಮುದ್ರೆಯನ್ನು ಘೋಷಿಸಿದೆ. ಪರಿಣಾಮವಾಗಿ 13 ವರ್ಷದಿಂದ ದುಡಿಯುತ್ತಿದ್ದ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ.

ಆಡಳಿತವರ್ಗದ ಈ ಕ್ರಮವು ಕೈಗಾರಿಕಾ ವಿವಾದ ಕಾಯಿದೆ ಸೆಕ್ಷನ್ 23ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಈ ಹಿಂದೆಯೂ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲು ಆಡಳಿತವರ್ಗವು ಪ್ರಯತ್ನಿಸಿದ್ದು, ಕೈಗಾರಿಕಾ ವಿವಾದ ಕಾಯಿದೆಯ ಸೆಕ್ಷನ್ 33 ರನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತದೆ. ಈ ಬಗ್ಗೆ ಅಪರ ಕಾರ್ಮಿಕ ಆಯುಕ್ತರಿಗೆ ದಿನಾಂಕ 20.11.2020 ರಂದು ದೂರು ನೀಡಲಾಗಿದೆ.

Office : # 17/1, First Floor, Near BMTC Bus Stop, New Guddadahalli, Mysore Road, Bengaluru-560 026
Ph: 080-26745242 Email : gatwu@rediffmail.com Website : www.gatwu.org.in
NTUI: B-137, 1st Floor, Dayanand Colony, Lajpatnagar-IV, New Delhi - 110 0024, Ph: 011-26486931

ಆದ್ದರಿಂದ ತಾವು ಮಧ್ಯೆ ಪ್ರವೇಶಿಸಿ, ತಕ್ಷಣವೇ ಬೀಗಮುದ್ರೆಯನ್ನು ತೆರವುಗೊಳಿಸಲು ಆಡಳಿತವರ್ಗಕ್ಕೆ ಆದೇಶ ನೀಡಬೇಕೆಂದು ಮತ್ತು ಕೈಗಾರಿಕಾ ವಿವಾದ ಕಾಯಿದೆ ಸೆಕ್ಷನ್ 23 ಹಾಗೂ 33ರ ಸ್ಪಷ್ಟ ಉಲ್ಲಂಘನೆ ಮಾಡಿದ್ದಕ್ಕಾಗಿ ಆಡಳಿತವರ್ಗದವರ ಮೇಲೆ ಪ್ರಾಸಿಕ್ಯೂಶನ್ ಕ್ರಮವನ್ನು ಕೈಗೊಳ್ಳಬೇಕೆಂದು, ಅಥವಾ ಪ್ರಾಸಿಕ್ಯೂಶನ್ ಮಾಡಲು ಯೂನಿಯನ್‌ಗೆ ಅನುಮತಿ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ವಂದನೆಗಳೊಂದಿಗೆ,
ತಮ್ಮ ವಿಶ್ವಾಸಿ

ಪ್ರತಿಭಾ ಆರ್
(ಅಧ್ಯಕ್ಷರು)

ಪ್ರತಿ: ಅಪರ ಕಾರ್ಮಿಕ ಆಯುಕ್ತರು (ಕೈಗಾರಿಕಾ ಬಾಂಧವ್ಯ), ಕಾರ್ಮಿಕ ಭವನ.